





ಕಲಾಕೃತಿಗಳನ್ನು ಮಾಡಬಹುದು ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಹವ್ಯಾಸವಾಗಿ ಆರಂಭಗೊಂಡ ಇವರ ಕಲಾಸೇವೆ ಮುಂದಿನ ದಿನಗಳಲ್ಲಿ ಅದ್ಭುತ ಕಲಾವಿದರಾಗುವಂತೆ ಮಾಡಿದೆ.

ಮರಗಳನ್ನು ರಕ್ಷಿಸಿ, ನಿಸರ್ಗವನ್ನು ರಕ್ಷಿಸಿ, ಪಕ್ಷಿಗಳನ್ನು ರಕ್ಷಿಸಿ ಇದರ ಜೊತೆಗೆ ಮುಖದಲ್ಲಿ ಭಾವನಾತ್ಮಕ ಸಂದೇಶ ನೀಡುವ ವಿಭಿನ್ನ ಶಿಲ್ಪಗಳು ಕಲಾಸಕ್ತರನ್ನ ಆಕರ್ಷಿಸಿದೆ. ಆವೆ ಮಣ್ಣಿನ ಕಲಾಕೃತಿಗಳನ್ನು ಮಾಡಲು ಕರಾವಳಿಯಲ್ಲಿ ಸಿಗುವ ಆವೆ ಮಣ್ಣನ್ನು ತಂದು ಅದರಲ್ಲಿರುವ ಕಲ್ಲು ಮತ್ತು ಮಣ್ಣನ್ನು ಬೇರ್ಪಡಿಸಿ ಅದನ್ನು ನೀರು ಹಾಕಿ ಹದ ಮಾಡಿಕೊಂಡು ನಂತರ ಈ ಮಣ್ಣಿನಿಂದ ಹಲವಾರು ವಿಭಿನ್ನ ಶಿಲ್ಪಗಳನ್ನು ರಚಿಸಬಹುದು. ಕಲಾವಿದ ವೆಂಕಿ ಪಲಿಮಾರ್‌ರವರ ಕಲಾ ಗ್ಯಾಲರಿ ಚಿತ್ರಾಲಯದಲ್ಲಿ ಇವೆಲ್ಲವೂ ಇದ್ದು, ಅವರಲ್ಲಿ ತರಬೇತಿಯನ್ನು ಪಡೆದು ವಿಭಿನ್ನ ಶಿಲ್ಪಗಳನ್ನು ರಚಿಸಿದ್ದಾರೆ.

ಕಲಾಕೃತಿಗಳಲ್ಲಿ ನೈಜತೆ ತುಂಬಲು ಮುಖ್ಯವಾಗಿ ಬೇಕಾಗಿದ್ದು ಗ್ರಹಿಕೆ ಆಲೋಚನೆ ಮತ್ತು ಅಭಿವ್ಯಕ್ತಿತ್ವ. ಇವರು ಪ್ರಕೃತಿಯಲ್ಲಿ ಏನನ್ನಾದರು ನೋಡಿದಾಗ ಯಾವುದರಲ್ಲಿ ಆಕರ್ಷಿತರಾಗುತ್ತಾರೋ ಅದನ್ನೇ ಕಲಾವಸ್ತುವನ್ನಾಗಿ ಬಿಂಬಿಸಿದ್ದಾರೆ. ಪ್ರಕೃತಿಯ ಅಳಿವು ಹೇಗೆ ಆಗುತ್ತದೆ? ಅದನ್ನು ಹೇಗೆ ಉಳಿಸಬಹುದು ಎಂಬುದನ್ನು ತಮ್ಮ ಶಿಲ್ಪಗಳಲ್ಲಿ ಬಿಂಬಿಸಿದ್ದಾರೆ.

'ನಮ್ಮಿಂದ ಪ್ರಕೃತಿನಾಶ ಬೇರೆ ಬೇರೆ ರೀತಿಯಲ್ಲಿ ಆಗುತ್ತದೆ. ಇದರ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಬಹಳ ಮುಖ್ಯ ತಾವು ಪ್ರಕೃತಿಯ ಅಳಿವನ್ನು ತಮ್ಮ ಕಲಾಕೃತಿಗಳ ಮೂಲಕವಾಗಿ ಅದರಲ್ಲೂ ಶಿಲ್ಪಗಳಲ್ಲಿ ಬಿಂಬಿಸಿದರೆ. ಜನಮಾನಸವನ್ನು ತಲುಪಬಹುದು, ಜನರಲ್ಲಿ ಅರಿವು ಮೂಡಿಸಬಹುದು. ಹೀಗೆ ಶಿಲ್ಪಗಳು ಜನರನ್ನು ಸೆಳೆಯುವುದಲ್ಲದೆ ಪರೋಕ್ಷವಾಗಿ ಪ್ರಕೃತಿಯನ್ನು ಉಳಿಸಲು ಪ್ರೇರೇಪಣೆಯನ್ನೂ ನೀಡುತ್ತದೆ. ಅದಕ್ಕಾಗಿ ಈ ಮಾಧ್ಯಮದಲ್ಲಿಯೇ ಹಲವಾರು ಕಲಾಕೃತಿಗಳನ್ನು ಮಾಡಿದ್ದೇನೆ ಎನ್ನುತ್ತಾರೆ ಕಲಾವಿದೆ ಗಾಯತ್ರಿ ನಾಯಕ್.